ರಟ್ಟಿಹಳ್ಳಿ - ರೂ. 96.60 ಲಕ್ಷ ಅಂದಾಜು

ಕುಡಪಲಿ - ರೂ. 80.00 ಲಕ್ಷ ಅಂದಾಜು.

ಇ) ಅಂದಾಜುಗಳಿಗೆ ಸಕ್ಷಮ ಮಂಜೂರಾತಿ ದೊರತಿಲ್ಲವಾದ ಕಾರಣ ಕಾಮಗಾರಿಗಳನ್ನ ಪ್ರಾರಂಭಿಸಲು ವಿಳಂಬವಾಗಿದೆ.

ಈ) ಸರ್ವೆ ಕೆಲಸ, ಸ್ಥಳ ಪರಿಶೀಲನೆ, ವಿನ್ಯಾಸದ ಕೆಲಸಗಳಿಗಾಗಿ ಸಾಕಷ್ಟ ಕಾಲಾವಕಾಶ ಬೇಕಾಗುವುದರಿಂದ ವಿಳಂಬಕ್ಕೆ ಯಾರು ಕಾರಣರಾಗುವುದಿಲ್ಲ.

ಉ) ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ನಂತರ ಕಾಮಗಾರಿಯನ್ನ ಕೈಗೆತ್ತಿಕೊಳ್ಳಲಾಗುವುದು ಮತ್ತು ಅನುದಾನ ಲಭ್ಯತೆಗನುಸಾರವಾಗಿ ಪೂರ್ಣಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗುವುದು.

ಧಾರವಾಡ ಜಿಲ್ಲೆ ಹಿರೇಕೆರೂರು ತಾಲ್ಲೂಕು ಹಂಸಭಾವಿ ಗ್ರಾಮದಲ್ಲಿ 33:1 ಕೆ.ವಿ. ಸಬ್ ಸ್ಟೇಷನ್ ಆರಂಭ

291 - ಶ್ರೀ ಬಿ.ಪಿಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕು ಹಂಸಭಾವಿ ಗ್ರಾಮದಲ್ಲಿ 33:11 ಕೆವಿ ಸಬ್-ಸ್ಟೇಷನ್ ನಿರ್ಮಾಣ ಮಾಡುವ ಬಗ್ಗೆ ಮಂಜೂರಾತಿಯನ್ನು ಕೊಡಲಾಗಿದೆಯೇ?

ಆ) ಆ ಬಗ್ಗೆ ತಗಲುವ ಅಂದಾಜು ವೆಚ್ಚ ಎಷ್ಟು? ಹಾಗೂ ಅವಶ್ಯವಿರುವ ಭೂಮಿಗೆ ಎಷ್ಟು ಹಣ ಒದಗಿಸಲಾಗಿದೆ, ಹಾಗೂ ಭೂಮಿಯನ್ನು ಕೆ.ಇ.ಬಿ ತಾಬಾ ಪಡೆಯಲಾಗಿದೆಯೇ?

ಇ) ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ಮತ್ತು ಪೂರ್ಣ ಗೊಳಿಸಲಾಗುವುದು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು);

ಅ) ಹೌದು.

ಆ) ಇದಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು 80 ಲಕ್ಷ ರೂ. ಅವಶ್ಯವಿರುವ ಭೂಮಿಯನ್ನು ಇನ್ನೂ ವಶಪಡಿಸಿಕೊಂಡಿಲ್ಲವಾದ್ದರಿಂದ ಭೂಮಿಯ ಬಗ್ಗೆ ಹಣವನ್ನು ಇದುವರೆಗೆ ಖರ್ಚು ಮಾಡಿಲ್ಲ. ಭೂಮಿಯನ್ನು ಇದುವರೆಗೆ ಕೆ.ಇ.ಬಿ. ತಾಬಾ ಪಡೆದಿಲ್ಲ.

ಇ) ಭೂಮಿಯನ್ನು ಕೆ.ಇ.ಬಿ. ತಾಬಾ ಇದುವರೆಗೆ ಪಡೆದಿಲ್ಲವಾದ್ದರಿಂದ ಸಬ್ ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿಲ್ಲ. ಬ್ಯಾಡಗಿಯಿಂದ ಹಂಸಭಾವಿಗೆ ನಿರ್ಮಾಣ ಮಾಡಬೇಕಾಗಿರುವ 33 ಕೆ.ವಿ. ವಿದ್ಯುತ್ ಲೈನಿನ ಸರ್ವೆ ಕಾರ್ಯವನ್ನು ಪ್ರಾರಂಭಿಸಲಾಗಿದೆ. 33 ಕೆ.ವಿ. ಲೈನು ಮತ್ತು ಸಬ್ಸ್ಟೇಷನ್ಗಳ ನಿರ್ಮಾಣ ಕಾರ್ಯಗಳನ್ನು ಡಿಸೆಂಬರ್ 94ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ಬಸವ ಕಲ್ಯಾಣದಲ್ಲಿ ಸಣ್ಣ ನೀರಾವರಿ ಉಪವಿಭಾಗ ಪ್ರಾರಂಭ

335 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಹಲವಾರು ಹಳೆಯ ಕೆರೆಗಳಿದ್ದು ಸಣ್ಣ ನೀರಾವರಿ ಕಾಮಗಾರಿಗಳು ನಡೆಯುತ್ತಿದ್ದು ಅಲ್ಲಿ ಉಪವಿಭಾಗವಿಲ್ಲದೆ, ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;